MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - TUESDAY 17-1-2023

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಪಾಮೆಣ್ಣೆ ದರ ಇಳಿಕೆ

ಜನವರಿ ತಿಂಗಳಲ್ಲಿ ಮಲೇಶೀಯಾದಿಂದ ಪಾಮೆಣ್ಣೆ ರಫ್ತು ಅರ್ಧಾಂಶ ಇಳಿಕೆಯಾಗಿದೆ. ಪ್ರಮುಖ ಆಮದು ದೇಶಗಳಾದ ಚೀನಾ ಹಾಗೂ ಭಾರತದಿಂದ ಆಮದು ಇಳಿಕೆಯಾಗಿದೆ. ಯುರೋಪ್ ದೇಶಗಳಿಗೆ ರಫ್ತಾಗುತ್ತಿಲ್ಲ. ಇವುಗಳಿಂದ ಮಲೇಶಿಯನ್ ಪಾಮೆಣ್ಣೆ ದರ ಇಳಿಕೆಯಾಗಿದೆ. ಅಲ್ಲಿನ ಕರೆನ್ಸಿ ಮೌಲ್ಯ ಕಡಿಮೆಯಾಗಿರುವುದೂ ದರ ಇಳಿಕೆಗೆ ಪೂರಕವಾಗಿದೆ. ಭಾರತ 2022 ನವೆಂಬರ್ ಹಾಗೂ ಡಿಸೆಂಬರ್ ತಿಂಗಳುಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಪಾಮೆಣ್ಣೆ ಆಮದು ಕಂಡಿದೆ.

## ಮಹಾರಾಷ್ಟ್ರದಲ್ಲಿ ಸಕ್ಕರೆ ಉತ್ಪಾದನೆ ಇಳಿಕೆ

ಹಿಂದಿನ ವರ್ಷಕ್ಕಿಂತ ಈ ವರ್ಷದಲ್ಲಿ ಮಹಾರಾಷ್ಟ್ರದ ಸಕ್ಕರೆ ಉತ್ಪಾದನೆ ಇಳಿಕೆಯಾಗಿದೆಯೆನ್ನಲಾಗಿದೆ. ಕಬ್ಬಿನ ಉತ್ಪಾದನೆ ಇಳಿಕೆ ಹಾಗೂ ಇಥೆನಾಲ್ ಉತ್ಪಾದನೆಗೆ ವರ್ಗಾವಣೆ ಇವುಗಳಿಂದ ಉತ್ಪಾದನೆ ಇಳಿಕೆಯಾಗಿದೆಯೆನ್ನಲಾಗಿದೆ. ದೇಶೀಯ ಸಕ್ಕರೆ ಉತ್ಪಾದನೆಯೂ ಹಿಂದೆ ಅಂದಾಜಿಸಿದ್ದಕ್ಕಿಂತ ಇಳಿಕೆಯಾಗಬಹುದೆನ್ನಲಾಗಿದೆ. ಹಿಂದಿನ ವರ್ಷ ದಾಖಲೆ 35.9 ಮಿಲಿಯನ್ ಟನ್ ಸಕ್ಕರೆ ಉತ್ಪಾದನೆಯಾಗಿತ್ತು. ಈ ವರ್ಷ ದೇಶದ ಉತ್ಪಾದನೆ ಹಿಂದಿನ ವರ್ಷಕ್ಕಿಂತ 4 ಶೇಕಡಾ ಇಳಿಕೆಯಾಗಿ 34.3 ಮಿಲಿಯನ್ ಟನ್ ಉತ್ಪಾದನೆಯಾಗಬಹುದೆನ್ನಲಾಗಿದೆ. 2022 ಅಕ್ಟೋಬರ್ 1 ರಿಂದ 2023, ಜನವರಿ 15 ರ ತನಕ ದೇಶದಲ್ಲಿ 15.7 ಮಿಲಿಯನ್ ಟನ್ ಸಕ್ಕರೆ ಉತ್ಪಾದನೆಯಾಗಿದೆಯೆನ್ನಲಾಗಿದೆ. ಹಿಂದಿನ ವರ್ಷ ಇದೇ ಅವಧಿಯ ಉತ್ಪಾದನೆಯಾದ 15.1 ಮಿಲಿಯನ್ ಟನ್‌ಗಳಿಗಿಂತ ಇದು 4 ಶೇಕಡಾ ಹೆಚ್ಚಳವಾಗಿದೆಯೆನ್ನಲಾಗಿದೆ. ತಿಂಗಳ ಮಾರಾಟ ಕೋಟಾಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಮಿಲ್‌ಗಳು ಮಾರಾಟ ಮಾಡುತ್ತಿರುವುದರಿಂದ ಸಕ್ಕರೆ ಮಾರುಕಟ್ಟೆ ದರ ಹಿಂದಿನ ಎರಡು ಮೂರು ವಾರಗಳಲ್ಲಿ ಕ್ವಿಂಟಾಲ್‌ಗೆ ರೂ.60 ರಿಂದ 80 ಇಳಿಕೆಯಾಗಿದೆಯೆನ್ನಲಾಗಿದೆ. ಬೇಡಿಕೆಗಿಂತ ಹೆಚ್ಚಾಗಿ ಮಾರುಕಟ್ಟೆಗೆ ಪೂರೈಕೆಯಾಗುತ್ತಿರುವುದರಿಂದ ದೀಪಾವಳಿಯ ನಂತರ ಈ ವರೆಗೆ ಸಕ್ಕರೆ ದರ 4 ಶೇಕಡಾ ಇಳಿಕೆಯಾಗಿದೆಯೆನ್ನಲಾಗಿದೆ. ಮಿಲ್‌ಗಳು ಹಿಂದಿನೆರಡು ಮೂರು ವಾರಗಳಿಂದ ಎಕ್ಸ್‌ಮಿಲ್ ದರಗಳನ್ನು 1 ರಿಂದ 2 ಶೇಕಡಾ ಇಳಿಕೆ ಮಾಡಿವೆಯೆನ್ನಲಾಗಿದೆ.